

ಮದುವೆ ದಿನದ ಹೊತ್ತಿಗೆ ಸರ್ಕಾರದವರು ಯಾವ ರೀತಿ ಹೊಸ ಕಾನೂನು ಮಾಡಿರುತ್ತಾರೋ ಅಂತ ಭಯ ಬೇರೆ ಆಗ್ತಿದೆ. ಏನು ಮಾಡಲಿ ಹೇಳು' ಎಂದು ಬೇಜಾರಿನಿಂದಲೇ ಹೇಳಿದ.

ಮದುವೆಮನೆಯ ಸಂಭ್ರಮದ ವಾತಾವರಣ ಇರಬೇಕಾದ ಅವರ ಮನೆಯಲ್ಲಿ, ಎಲ್ಲರೂ ಯಾರನ್ನೋ ಕರೆಯುವ ಅಥವಾ ಕರೆಯದೇ ಇರುವ ಕಾರಣಕ್ಕೆ ಮುಖ ಊದಿಸಿಕೊಳ್ಳುವ ಪರಿಸ್ಥಿತಿ ಬಂದಿರುವುದು ಎಂಥ ವಿಪರ್ಯಾಸ.

ಅವನೇ ಮುಂದುವರೆಸಿದ. 'ನೀನು ಯಾವಾಗಲೂ ಸಾಹಿತ್ಯದಲ್ಲಿ ಬೇರೆ ಬೇರೆ ಸಮಸ್ಯೆಗಳಿಗೆ ಉತ್ತರ ಇದ್ದೇ ಇರುತ್ತೆ ಅಂತಿದ್ದೆ. ಆದರೆ ಇಂಥ ಸಮಸ್ಯೆಗೆ ಉತ್ತರ ಇರುತ್ತಾ?' ಅಂತ ಕೇಳಿದ.

'ಸಾಹಿತ್ಯದಲ್ಲಿ ಎಲ್ಲಾ ಸಮಸ್ಯೆಗಳಿಗೂ ಉತ್ತರ ಇರುತ್ತೆ ಅಂತ ನಾನು ಹೇಳಿಲ್ಲ. ನಾನು ಹೇಳಿದ್ದು, ಉತ್ತಮ ಸಾಹಿತ್ಯದಲ್ಲಿ ಪಾತ್ರ–ಸನ್ನಿವೇಶಕ್ಕೆ ತಕ್ಕಂತೆ ಸಮಸ್ಯೆಗಳಿಗೆ ತಾರ್ಕಿಕ ಅಂತ್ಯ ಇರುತ್ತೆ ಅಂತ. ಅದು ಬಿಡು. ಈಗ ನಿನ್ನ ಆಹ್ವಾನಪತ್ರಿಕೆಯ ಸಮಸ್ಯೆಗೆ ಪರಿಹಾರ ಯೋಚಿಸೋಣ. ನಿನ್ನ ಮಗಳು ಇದಕ್ಕೆ ಏನಂತಾಳೆ' ಎಂದು ವಿಚಾರಿಸಿದೆ.

'ಪಾಪ, ಅವಳು ಹೀಗೇ ಆಗಬೇಕು ಅಂತ ಏನೂ ಕೇಳ್ತಿಲ್ಲ. 'ಅಪ್ಪ, ನಾವಿಬ್ಬರೂ ಸರಳವಾಗಿ ವಿವಾಹ ಆಗಬೇಕು ಅಂತ ನಿರ್ಧರಿಸಿ ಆಗಿದೆ. ಅದನ್ನು ನಿಮಗೆ ಸ್ಪಷ್ಟವಾಗಿ ಹೇಳಿದ್ದೇವೆ. ನಿಮಗೆ ಹೇಗೆ, ಏನು ಅನುಕೂಲವೋ ಹಾಗೆ ಮಾಡಿ. ಪರಿಸ್ಥಿತಿ ತಿಳಿಯಾದ ಮೇಲೆ ನಾವೇ ಒಂದು ಸಂತೋಷ ಕೂಟ ಏರ್ಪಾಟು ಮಾಡ್ತೀವಿ. ಹತ್ತಿರದ ನೆಂಟರನ್ನೆಲ್ಲಾ ಕರೆದು ಪರಸ್ಪರ ಪರಿಚಯ ಮಾಡಿಕೋತೀವಿ' ಅಂತಿದ್ದಾಳೆ.'

ಸ್ನೇಹಿತನ ಮಗಳ ಮೇಲೆ ಅಭಿಮಾನ ಹೆಚ್ಚಿತು. 'ಅವಳ ಮಾತು ಕೇಳಿ ನನಗೆ ತುಂಬಾ ಸಂತೋಷ ಆಯ್ತು ಅಂತ ಅವಳಿಗೆ ಹೇಳಿಬಿಡಪ್ಪ. ಹಾಗೆ ನೋಡಿದರೆ ಈಗಿನ ಪರಿಸ್ಥಿತಿಯಲ್ಲಿ ಏನು ಮಾಡಬಹುದು ಅನ್ನುವ ವಿಚಾರ ಅವಳಿಗೇ ಚೆನ್ನಾಗಿ ಗೊತ್ತಿರುವ ಹಾಗಿದೆ' ಅಂದೆ.

ಅಷ್ಟರಲ್ಲಿ ನನಗೆ ಏನೋ ಹೊಳೆದಂತೆ ಆಯಿತು. 'ನೀನು ಸಾಹಿತ್ಯ–ಪರಿಹಾರ ಅಂದ್ಯಲ್ಲ, ಇದ್ದಕ್ಕಿದ್ದ ಹಾಗೆ ಹೊಳೀತು ನೋಡು...' ಅಂತ ಪೀಠಿಕೆ ಹಾಕಿದೆ.

ಅವನು ಸಂತೋಷದಿಂದ 'ಪುಣ್ಯಾತ್ಮ, ಆ ಪರಿಹಾರ ಹೇಳಿ ಇನ್ನೂ ಅಷ್ಟು ಪುಣ್ಯ ಕಟ್ಟಿಕೋಪ್ಪ' ಅಂದ.

'ನಮ್ಮ ಪ್ರಸಿದ್ಧ ಕವಿಗಳು ಕೆ.ಎಸ್. ನರಸಿಂಹಸ್ವಾಮಿ ಗೊತ್ತಲ್ಲ. ಅವರ ಒಂದು ಸುಂದರ, ಪ್ರಸಿದ್ಧ ಕವನ 'ರೈಲ್ವೆ ನಿಲ್ದಾಣದಲ್ಲಿ.' ಅದರಲ್ಲಿ ರೈಲ್ವೆ ಪ್ಲಾಟ್‌ಫಾರಂ ಮೇಲೆ ನಡೆಯುವ ಸನ್ನಿವೇಶದ ಭಾವಪೂರ್ಣ ಚಿತ್ರಣ ಇದೆ.'

ನನ್ನನ್ನು ಅರ್ಧದಲ್ಲೇ ತಡೆದು, ನನ್ನ ಸ್ನೇಹಿತ 'ಅಪ್ಪ, ನನ್ನ ರೈಲ್ ಹತ್ತಿಸಬೇಡ! ಅದೇನು ಅಂತ ಬೇಗ ಹೇಳಪ್ಪ...' ಅಂದ.

ನಾನು ನಗುತ್ತಾ, 'ಸ್ವಲ್ಪ ತಡಿ, ಸಿಗ್ನಲ್ ಇನ್ನೂ ಬಿದ್ದಿಲ್ಲ ರೈಲು ಹೊರಡೋಕೆ. 'ಎಲ್ಲಿದ್ದೀಯೇ ಮೀನಾ?' ಅಂತ ಪ್ರಾರಂಭವಾಗುವ ಆ ಕವನದಲ್ಲಿ ಮೀನಾ ಹೀಗೆ ಹೇಳ್ತಾಳೆ:

ಕಿಟಕಿಯ ಜತೆಗೂ ಬರುವುದು  
ಬೇಡಮ್ಮಾ, ಹೋಗು.  
ಇಲ್ಲಿಂದಲೆ ಕೈಮುಗಿಯುವೆ–  
ನಲ್ಲಿಂದಲೆ ಹರಸು.

ಅದನ್ನೇ ಸ್ವಲ್ಪ ಬದಲಾವಣೆ ಮಾಡಿಕೊಂಡರೆ ನಿನಗೆ ಸರಿಯಾಗಿರುತ್ತೆ' ಅಂದೆ.

'ಹಾಗಂದ್ರೆ?' ಅವನ ಪ್ರಶ್ನೆ.

'ಮದುವೆಯ ಮನೆಗೂ ಬರುವುದು  
ಬೇಡಮ್ಮಾ(ಪ್ಪ), ನೀನಲ್ಲೇ ಇರು.  
ಇಲ್ಲಿಂದಲೆ ಕೈಮುಗಿಯುವೆ–  
ನಲ್ಲಿಂದಲೇ ಹರಸು.

ಅಂತ ಮಾಡಿಕೊ. ಲಗ್ನಪತ್ರಿಕೆ ಮಾಡಿ ಎಲ್ಲರಿಗೂ ಕಳಿಸು. ಮದುವೆ ನಡೆಯುವ ಸ್ಥಳ ಮಾತ್ರ ತಿಳಿಸಬೇಡ. ಕೊನೆಗೆ, ನಿಮ್ಮ ಮನೆಯಿಂದಲೇ ಮದುಮಕ್ಕಳನ್ನು ದಯವಿಟ್ಟು ಹರಸಿ ಅಂತ ಹೇಳಿ ನಿನ್ನ ಇಮೇಲ್ ವಿಳಾಸ ಸೇರಿಸು. ನೀನು ಕರೆದ ಹಾಗೂ ಆಯ್ತು, ಅವರು ಬಂದ ಹಾಗೂ ಆಯ್ತು' ಅಂತ ಸೂಚನೆ ಕೊಟ್ಟೆ.

'ಸೂಪರ್ ಕಣೋ ನೀನು! ಹೀಗೆ ಸಾಹಿತ್ಯ ಓದ್ತಾ ಇರು, ನನ್ನಂಥವರಿಗೆ ಅನುಕೂಲ ಆಗುತ್ತೆ. ನನ್ನ ಹೆಂಡತಿಗೆ ತಿಳಿಸಿ ಇವತ್ತೇ ಲಗ್ನಪತ್ರಿಕೆ ಮುದ್ರಣಕ್ಕೆ ಕೊಟ್ಟುಬಿಡ್ತೀನಿ' ಎಂದು ಖುಷಿಯಿಂದ ಹೇಳಿದ.

'ಒಳ್ಳೇದಾಗ್ಲಪ್ಪ. ಲಗ್ನಪತ್ರಿಕೆ ಕರಡು ಇಮೇಲ್‌ನಲ್ಲಿ ಕಳಿಸು. ತಿದ್ದಿ ಕಳಿಸ್ತೀನಿ' ಅಂತ ನನ್ನ ಸಹಾಯಹಸ್ತ ಚಾಚಿದೆ.

'ಕರಡಚ್ಚು ಎಲ್ಲ ಆಮೇಲೆ; ಮೊದಲು ಕೈಬರಹದಲ್ಲಿ ಕಳಿಸ್ತೀನಿ. ನೋಡಿ ತಿದ್ದಿ ಕಳಿಸು. ಈ ಸೂಪರ್ ಐಡಿಯಾ ಕೊಟ್ಟಿದ್ದಕ್ಕೆ ನಿನ್ನ 48ನೇ ಸ್ಥಾನದಿಂದ 28ನೇ ಸ್ಥಾನಕ್ಕೆ ಏರಿಸಿದ್ದೀನಿ. ಮದುವೆಗೆ ತಪ್ಪಿಸಿಕೊಳ್ಳದೆ ಬರ್ಲೇಬೇಕು' – ನನ್ನ ಸಲಹೆಯಿಂದ ನಿರಾಳವಾಗಿದ್ದ ಅವನು ಮನಃಪೂರ್ವಕವಾಗಿ ಆಹ್ವಾನಿಸಿದ.

'ಥ್ಯಾಂಕ್ಸ್. ಆದರೆ ನಾನು ಇಲ್ಲಿಂದಲೇ ಹರಸ್ತೀನಿ. ನೀನು ಬೇರೆಯವರನ್ನು ಕರೆದುಕೋ' ಅಂತ ಹೇಳಿ ಫೋನ್ ಇಟ್ಟೆ.

ಪ್ರತಿಕ್ರಿಯಿಸಿ: feedback@sudha.co.in